ತಕ್ಕಂತಹ ಸಂಬಂಧವನ್ನು ಅವನಿಗೆ ಸೂಚಿಸಿದೆ. ಫೋಟೊ ನೋಡಿ "ಹುಡುಗಿ ಪರವಾಗಿಲ್ಲ ರೀ, ಇಂಟ್ರಸ್ಟಿಂಗ್, ಮಾಡ್, ಕ್ಯೂಟ್" ಎಂದೆಲ್ಲಾ ಹೇಳಿದ. ಬಹುಶಃ ಇದು ಆಗಿಯೇಬಿಡುತ್ತದೆಯೆನಿಸಿ "ನೋಡಿ ಗೌತಮ್, ದಿಸ್ ಈಸ್ ದ ಬೆಸ್ಟ್ ಗರ್ಲ್ ಐ ಕ್ಯಾನ್ ಸಜೆಸ್ಟ್. ಇದು ಬಿಟ್ರೆ ಇನ್ನು ಸಿಕ್ಕಲ್ಲ. ಇಶ್ಯೂಲೆಸ್ ಡಿವೋರ್ಸಿ ನಿಮ್ಗೆ ಫರ್ಫೆಕ್ಟ್ ಮ್ಯಾಚು. ನಾಳೆ ನಿಮ್ಮನ್ನ ಮೀಟ್ ಮಾಡಿಸ್ಲಾ? ಒಂದು ಕೆಲಸ ಮಾಡಿ, ನಾಳೆ ಎಲ್ಲಾದರೂ ಒಳ್ಳೆಕಡೆ ಅವಳನ್ನ ಡಿನ್ನರ್‌ಗೆ ಕರಕೊಂಡು ಹೋಗಿ. ಅವಳ ನಂಬರ್ ಕೊಡ್ತೀನಿ. ನಾನೂ ಅವಳ ಜೊತೆ ಮಾತಾಡಿದೀನಿ. ಅವಳು ತುಂಬಾ ಫಾಸ್ಟಾಗಿದ್ದಾಳೆ. ಡಿನ್ನರ್‌ಗೇನು? ರೆಸಾರ್ಟ್‌ಗೆ ಬೇಕಾದರು ಬರ್ತಾಳೆ ನಿಮ್ಮ ಜೊತೆ. ನಿಮ್ಮ ಬಗ್ಗೆ ತುಂಬಾ ಇಂಟ್ರಸ್ಟೆಡ್ ಇದಾಳೆ" ಎಂದೆ. ಅವನು ಒಂದು ನಿಮಿಷ ತಡೆದು "ಸರಿ, ಆದ್ರೆ ನೀವು ಫೋನ್ ಮಾಡಬೇಡಿ. ನಾನೇ ಮಾತಾಡ್ತೀನಿ. ನಾಡಿದ್ದು ಐ ವಿಲ್ ಗೆಟ್ ಬ್ಯಾಕ್ ಟು ಯೂ" ಎಂದ. ಯಾಕೋ ಅವನ ಮುಖದಲ್ಲಿ ಯಾವಾಗಿನ ಖುಷಿ ಲವಲವಿಕೆ ಕಂಡುಬರಲಿಲ್ಲ. ಒಂದೆರಡು ದಿನ ಏನೂ ಸುದ್ದಿಯೇ ಇರಲಿಲ್ಲ. ನಾನೇ ಫೋನ್ ಮಾಡಿದರೂ ಸ್ವಿಚ್‌ಆಫ್ ಬಂತು. ಆ ಹುಡುಗಿ ಮಮತಾಗಾದ್ರೂ ಮಾತಾಡಿ ವಿಷ್ಯ ತಿಳಿದುಕೊಳ್ಳೋಣ ಎಂದು ಅವಳ ನಂಬರಿಗೆ ಫೋನ್ ಮಾಡ್ದೆ. ಫೋನ್ ಎತ್ತಿಕೊಂಡು ಹಿಗ್ಗಾ ಮುಗ್ಗಾ ದಬಾಯಿಸಿದಳು. "ಮದ್ವೇಲಿ ಇಂಟ್ರಸ್ಟ್ ಇಲ್ದಿರೋರ್ಗೆಲ್ಲ ಯಾಕೆ ನನ್ನ ನಂಬರು, ಪ್ರೊಫೈಲ್ ಕೊಟ್ರೆ. ಅವನೊಬ್ಬ ಲೂಸು. ನಂಗೆ ನನ್ನ ಟೈಮ್ ತುಂಬಾ ಪ್ರಿಶಿಯಸ್" ಎಂದು ಫೋನ್ ಕಟ್ ಮಾಡಿದಳು. ಎಲಾ ಇವನಾ... ಏನಾಗಿದೆ ಇವನಿಗೆ ಇಲ್ಲಾ ಮಮತಾ ಹೇಳಿದಂತೆ ಇವನು ನಿಜವಾಗಿ ಲೂಸಾ... ಅನ್ನುವ ಅನುಮಾನ ನನಗೂ ಹುಟ್ಟಿತು. ಇರಲಿ... ಅವನೆಲ್ಲಿದ್ದರೂ ಅವನನ್ನು ತರುಬಿ ಮನಸ್ಸಿಗೆ ಸಮಾಧಾನವಾಗುವವರೆಗೆ ಬೈಯ್ಯಬೇಕೆಂದುಕೊಂಡೆ. ಮರುದಿನ ಸಂಜೆ ಅವನೇ ಫೋನ್ ಮಾಡಿದ.

**"ರೀ ಮೇಡಮ್, ಜೀವನದ ಎಲ್ಲ ಅನುಭವಗಳೂ ಕಹಿಯಾಗೇ ಇರೋದಿಲ್ಲ. ಇಷ್ಟಕ್ಕೂ ಹೊಸ ಜೀವನ ಮಾಡೋ ಧೈರ್ಯ ಆತ್ಮವಿಶ್ವಾಸ ಇಲ್ಲದ ನಿಮಗೆ ಹೊಸ ಜೀವನ ಡಾಟ್ ಕಾಮ್ ನಡೆಸುವ ಅರ್ಹತೇನೇ ಇರೋದಿಲ್ಲ. ಜೀವನ ಪ್ರೀತಿ, ಆಶಾವಾದದಂಥ ಮಾತುಗಳು ಕೇವಲ ಬ್ಲಾಗುಗಳಲ್ಲಲ್ಲ, ಬದುಕಿನಲ್ಲೂ ಇರಬೇಕು. ಅದು ಬಿಟ್ಟೂ..." ಎಂದ.**

"ಸಾರಿ... ನಿಮ್ಗೆ ನನ್ನ ಮೇಲೆ ಕೋಪ ಬಂದಿದೆ ಅಂತ ಗೊತ್ತು. ನಾನು ಮದ್ವೆ ವಿಷಯದಲ್ಲಿ ಸೀರಿಯಸ್ಸಾಗಿಲ್ಲ ಅಂತಾನೂ ನೀವು ಅಂದುಕೊಂಡಿರಬೇಕು. ಹಾಗೇನೂ ಇಲ್ಲ. ನಾನು ನಿಜವಾಗಿ ಸೀರಿಯಸ್ಸಾಗೇ ಇದೀನಿ. ಆದ್ರೆ ನಾನು ನನ್ನ ಬಗ್ಗೆ ಕೊಟ್ಟ ಮಾಹಿತೀಲಿ ಸ್ವಲ್ಪ ತಪ್ಪಿದೆ. ಅದನ್ನು ನಿಮ್ಗೆ ಹೇಳಬೇಕು. ನಿಜವಾಗಿ ನಾನು ನಿಮ್ಮ ಹತ್ರ ಕ್ಷಮೆ ಕೇಳ್ಲೇಬೇಕು. ಇನ್ನು ಮುಂದೆ ನೀವು ನನಗೆ ಯಾವ ಹುಡುಗೀನೂ ಹುಡುಕೋದು ಬೇಕಾಗಿಲ್ಲ. ಅದಕ್ಕೆ ಕಾರಣಾನೂ ನಾನು ನಿಮ್ಹತ್ರ